# <u>2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು</u>

**ಸಿ.ಸಿ 569-2018** **ಸಿ. ಡಬ್ಲ್ಯೂಃ 06**

**ಪಿ. ಡಬ್ಲುಃ 06**

| | |
|---|---|
| ಸಾಕ್ಷಿದಾರರ ಹೆಸರು<br>ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಜಾಮು<br>ಸಿದ್ದಿಕ್ ಅಹಮ್ಮದ್<br>54 ವರ್ಷ<br>ಗೃಹಿಣಿ<br>ಮೈಸೂರು |
| | ಸತ್ಯ ಪ್ರತಿಜ್ಞೆಯ **ಮೇರೆಗೆ** ದಿನಾಂಕ 21.04.2026 |

<u>ಮುಖ್ಯ ವಿಚಾರಣೆಃ **ಶ್ರೀ. ಎಪಿಪಿ ವಕೀಲರಿಂದಃ**</u>

ಚಾಸಾ-2 ರಿಂದ 5, 7 ಮತ್ತು 8 ನನ್ನ ಸಂಬಂಧಿಕರು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಚಾಸಾ 2 ರವರಿಗೆ ಚಾಲನೆ ಮಾಡುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿದ ಎಂದು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ನಾನು ಕಾರಿನಲ್ಲಿ ನಿದ್ರೆಮಾಡುತ್ತಿದ್ದು, ಅಪಘಾತದವಾದ ನಂತರ ಎಚ್ಚರವಾಯಿತು. ಅಪಘಾತ ಯಾವ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ. ಈ ಅಪಘಾತದ ಸಂಬಂಧ ನನಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಈ ಪ್ರಕರಣದ ವಿದ್ಯಮಾನ ಗೊತ್ತಿಲ್ಲ. ಚಾಸಾ-1 ರವರ ಆರೋಪಿ ವಿರುದ್ಧ ದೂರು ನೀಡಿರುವ ವಿಚಾರ ಗೊತ್ತಿಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

<u>**ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ**</u>

ದಿಃ 31-05-2017 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ದಿಃ 29-05-2017 ರಂದು ನಮ್ಮ ತಂದೆಯವರಿಗೆ

ಆರೋಗ್ಯ ಸರಿ ಇಲ್ಲದ ಕಾರಣ ಆಸ್ಪತ್ರೆಗೆ ಸೇರಿಸಿ ಮರಣಹೊಂದಿದ್ದು ನಂತರ ಅವರ ಮೃತ ದೇಹವನ್ನು ನಮ್ಮ ಸ್ವಂತ ಊರಾದ ಕಣ್ಣೂರಿಗೆ ಆಂಬ್ಯೂಲೆನ್ಸ್ ನಲ್ಲಿ ತೆಗೆದುಕೊಂಡು ಹೋಗುತ್ತಿರುವಾಗ ನಾನು ಮತ್ತು ಚಾಸಾ–2 ರಿಂದ 6 ಮತ್ತು 8 ರವರು ನಾವುಗಳು ಹೋಗುತ್ತಿದ್ದ ಕಾರ್ ನಂಬರ್ ಕೆಎ–05–ಎಂಆರ್–9564 ಕಾರಿನಲ್ಲಿ ಚಾಸಾ–2 ರವರ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ದಿಃ 30–05–2017 ರಂದು ಬೆಳಗಿನ ಜಾವ 5.45 ಗಂಟೆ ಸಮಯದಲ್ಲಿ ನಂಜನಗೂಡು ಪಟ್ಟಣದ ಹುಲ್ಲಹಳ್ಳಿ ಸರ್ಕಲ್ ಹತ್ತಿರ ಗುಂಡ್ಲುಪೇಟೆ ಕಡೆಗೆ ಹೋಗುತ್ತಿದ್ದಾಗ ಚಾಸಾ–1 ರವರ ಚಾಲನೆ ಮಾಡುತ್ತಿದ್ದ ಕಾರಿಗೆ ಆರೋಪಿಯು ಕೆಎ–10–ಎಫ್–0014 ಬಸ್ಸನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಯಾವುದೇ ಸೂಚನೆ ನೀಡಿದೇ ಬಲಭಾಗಕ್ಕೆ ತಿರುಗಿಸಿಕೊಂಡಾಗ ನಾನು ಚಾಲನೆ ಮಾಡಿದ ಕಾರಿಗೆ ಡಿಕ್ಕಿಪಡಿಸಿದ ಎಂದರೆ ಸರಿಯಲ್ಲ. ನನಗೆ ಮತ್ತು ಚಾಸಾ 5, 7 ಮತ್ತು ಚಾಸಾ–8 ರವರಿಗೆ ಅಪಘಾತದಿಂದ ಸಣ್ಣ–ಪುಟ್ಟಗಾಯವಾದ ಕಾರಣ ಯಾವುದೇ ಚಿಕಿತ್ಸೆಯನ್ನು ಪಡೆದಕೊಂಡಿರುವುದಿಲ್ಲ ಹಾಗೂ ಚಾಸಾ– 5, 7 ಮತ್ತು ಚಾಸಾ–8 ರವರಿಗೂ ಅಪಘಾತದಿಂದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ–1 ರವರು ಆರೋಪಿತನ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಪಘಾತ ಪಡಿಸಿದ ಆರೋಪಿ ಹೆಸರು ಹರೀಶ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ದಿಃ 31–05–2017 _____________ ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಮೇಲೆ ಓದಿ ಹೇಳಲಾದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ–7 ಎಂದು ಗುರುತಿಸಲಾಯಿತು. ನಿಪಿ–7 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರು ಹೇಳಿಲ್ಲ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–7 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**2 ನೇ ಕಿ.**ಪ್ರ.ದ. ನ್ಯಾ. ದಂ. ನಂಜನಗೂಡು